# ಕಥೋಪದೇಶ

"ಟಪ್! ಟಪ್!" – ಯಾರೋ ಬಾಗಿಲು ಬಡಿಯುತ್ತಿರುವ ಸದ್ದು. ಒಂದು ಬಾರಿ, ಎರಡು ಬಾರಿ. ವಾಸ್ತವ ಪ್ರಪಂಚಕ್ಕೆ ಬಂದ ಅಗಸಗಿತ್ತಿಯು ಬಾಗಿಲು ತೆರೆದಳು. ತಾನು ಹಣ ಜಮಾಯಿಸುತ್ತಿದ್ದ ಬ್ಯಾಂಕಿನ ಮ್ಯಾನೇಜರ್ ನಿಂತಿದ್ದಾರೆ. ಅವರನ್ನು ಒಳಗೆ ಕರೆದೊಯ್ದು, ಸರಸರನೆ ಒಂದು ಹಳೆಯ ಕುರ್ಚಿ ಎಳೆದು ಕೂರಲು ವಿನಂತಿಸಿಕೊಂಡಳು. ಆ ಅಜ್ಜಿಯ ಹೊಳೆಯುತ್ತಿರುವ ಕಣ್ಣುಗಳಲ್ಲಿ ಬಾಲಕಿಯ ಮುಗ್ಧತೆ ಹೊರಸೂಸುತ್ತಿತ್ತು. ಆಕೆಯ ಜೀವಿತಾವಧಿಯ ಉಳಿಕೆಯ ಹಣವನ್ನು ಏನು ಮಾಡಲಿಚ್ಛಿಸುತ್ತಾಳೆಂದು ತಿಳಿಯುವ ಸಲುವಾಗಿ ಬಂದಿದ್ದಾರೆ ಆಡಳಿತಾಧಿಕಾರಿಗಳು. ಉಳಿತಾಯದ ಒಟ್ಟು ಮೊತ್ತ ಒಂದೂವರೆ ಲಕ್ಷ ಡಾಲರುಗಳು! ಬಯಕೆಗಳು ಎಂದರೆ ಏನೆಂದೂ ತಿಳಿಯದ, ಸರಳ ಬದುಕಿನ ಅಜ್ಜಿಯ ಊಹೆಗೂ ನಿಲುಕದ ಭಾರೀ ಮೊತ್ತ ಅದು! ಉಳಿತಾಯದ ಬಗ್ಗೆ ಒಮ್ಮೆಯೂ ಯೋಚಿಸುವ ಗೋಜಿಗೆ ಹೋಗದ ಆಕೆಗೆ ಆ ಹಣವನ್ನು ಖರ್ಚು ಮಾಡುವ ವಿಧಾನ ತಿಳಿಯುವುದೆಂತು?

ತನಗಾಗಲಿ ತನ್ನ ಬದುಕಿಗಾಗಲಿ ಎಂದೂ ಆಲೋಚಿಸದ ಅಗಸಗಿತ್ತಿ ತನ್ನ ಮನೆಯ ಬಳಿಯೇ ಇರುವ ಮಿಸ್ಸಿಸಿಪ್ಪಿ ವಿಶ್ವವಿದ್ಯಾನಿಲಯಕ್ಕೆ ಆ ಹಣವನ್ನು ದಾನ ನೀಡಲು ನಿರ್ಧರಿಸಿದಳು. "ನನಗೆ ಆ ಹಣದ ಆವಶ್ಯಕತೆಯಿಲ್ಲ. ವಿಶ್ವವಿದ್ಯಾನಿಲಯದ ಕಪ್ಪು ಜನಾಂಗದ ಒಂದು ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ಇದನ್ನು ಉಪಯೋಗಿಸಿ. ನಾನು ಸಾಯುವ ಮುಂಚೆ ಈ ಹಣ ಸದ್ವಿನಿಯೋಗವಾಗಲಿ" ಎಂದು ಅವಳು ಹೇಳಿದಳು.

ಶ್ರೀಮಂತಳಲ್ಲದಿದ್ದರೂ ಹೃದಯಶ್ರೀಮಂತಿಕೆಯಲ್ಲಿ ಶ್ರೀಮಂತರನ್ನೆಲ್ಲಾ ಮೀರಿಸಿದ್ದಳು ಈ ಅಗಸಗಿತ್ತಿ! ಈ ನಿಸ್ವಾರ್ಥ ದಾನದ ಮೂಲಕ ಈ ಅಜ್ಜಿಯ ಕೀರ್ತಿ ಕ್ಷಣಾರ್ಧದಲ್ಲಿ ಎಲ್ಲೆಡೆ ಪಸರಿಸಿತು. ಅವಳ ಪುಟ್ಟ ಮನೆ, ವರದಿಗಾರರು ವ್ಯಾಪಾರಸ್ಥರು ಮತ್ತಿತರ ಗಣ್ಯವಕ್ತಿಗಳಿಂದ ತುಂಬಿಹೋಯಿತು. ಅಜ್ಜಿಯ ಕೊನೆಯ ಇಚ್ಛೆ ಏನೆಂದು ಪ್ರಶ್ನಿಸಿದಾಗ ಸರಳಹೃದಯಿಯಾದ ಮ್ಯಕಾರ್ಟಿಯ ಉತ್ತರವೂ ಅಷ್ಟೇ ಸರಳವಾಗಿಯೇ ಇತ್ತು : "ಈ ದಾನದಿಂದ ಪದವಿ ಪಡೆದ ವಿದ್ಯಾರ್ಥಿಯ ಪದವಿಪ್ರದಾನ ಸಮಾರಂಭದಲ್ಲಿ ಭಾಗವಹಿಸುವ ಇಚ್ಛೆ ನನಗೆ." ಅಜ್ಜಿಯ ಈ ಪುಣ್ಯಕಾರ್ಯವು ಅನೇಕರಿಗೆ ಸ್ಫೂರ್ತಿ ನೀಡಿತು. ಶ್ರೀಮಂತ ವ್ಯಾಪಾರಸ್ಥನೊಬ್ಬ ಅಷ್ಟೇ ಮೊತ್ತವನ್ನು ದಾನ ನೀಡಿ, ಮ್ಯಕಾರ್ಟಿಯ ಹೆಸರಿನಲ್ಲಿ ಕಪ್ಪು ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಒಂದು ಸಂಸ್ಥೆಯನ್ನೇ ಸ್ಥಾಪಿಸಿದ.

ಆ ದಾನದಿಂದ ತನ್ನ ಜೀವನ ಪರಿವರ್ತನೆ ಹೊಂದಿದ ಪ್ರಥಮ ವಿದ್ಯಾರ್ಥಿಯಾದ ಮಿಸ್. ಬುಲ್ಲಕ್ ಎಂಬುವವಳು ಈಗ ೮೭ ವರ್ಷ ವಯಸ್ಸಿನ ಅಗಸಗಿತ್ತಿಯ ಜೀವನಸಂಗಾತಿಯಾಗಿದ್ದಾಳೆ. ಇತ್ತೀಚಿನ ಹತ್ತಾರು ವರ್ಷಗಳಿಂದ ಅಜ್ಜಿಯ ಮನೆ ನವೋತ್ಸಾಹದಿಂದ ತುಂಬಿದೆ. "ಯಾರು ಪರರಿಗಾಗಿ ತನ್ನ ಪ್ರಾಣವನ್ನರ್ಪಿಸಲು ಸಿದ್ಧನಾಗಿರುವನೋ ಆತನ ಮುಂದೆ ಒಟ್ಟು ಲೋಕವೇ ಪೂಜ್ಯಭಾವದಿಂದಲೂ, ಭಯದಿಂದಲೂ ನಿಲ್ಲುತ್ತದೆ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅದಕ್ಕೆ ಉತ್ತಮ ನಿದರ್ಶನ ಈ ಮ್ಯಕಾರ್ಟಿ.

(**ಕಥಾಸಂಗ್ರಹ:** ಸ್ವರ್ಣಗೌರಿ)

## ಭಾರತ ದೇಶದ ಮಹಾಪುರುಷರು – ಆರ್ಯಭಟ

ಆರ್ಯಭಟನು ಪ್ರಾಚೀನ ಭಾರತದ ಅತ್ಯಂತ ಶ್ರೇಷ್ಠ ಖಗೋಳಶಾಸ್ತ್ರಜ್ಞ ಮತ್ತು ಗಣಿತಶಾಸ್ತ್ರಜ್ಞನಾಗಿದ್ದನು. ಅವನ ಅನೇಕ ಸಿದ್ಧಾಂತಗಳನ್ನು ಪಾಶ್ಚಾತ್ಯ ವಿಜ್ಞಾನಿಗಳು ಅನೇಕ ಶತಮಾನಗಳನಂತರ ಮರು ಆವಿಷ್ಕಾರ ಮಾಡಿದ್ದಾರೆ, ಅಷ್ಟೆ ಅವನ ಹುಟ್ಟಿದೂರು ಪೂರ್ವ ಭಾರತದ ಕುಸುಮಪುರ. ಅವನು ಹುಟ್ಟಿದ್ದು, ಕ್ರಿ.ಶ. ೪೭೬ ರಲ್ಲಿ. ಆ ಕಾಲದಲ್ಲಿ ನಲಂದ ವಿಶ್ವವಿದ್ಯಾನಿಲಯದಲ್ಲಿ ಖಗೋಳ ವೀಕ್ಷಣಾಲಯವೊಂದು ನಿರ್ಮಾಣಗೊಂಡಿತ್ತು. ಆರ್ಯಭಟನು ಆ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದನು. ಅವನು **ಆರ್ಯಭಟೀಯ** ಮತ್ತು **ಆರ್ಯಭಟ ಸಿದ್ಧಾಂತ** ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನೆ. ಮೊದಲನೆಯ ಗ್ರಂಥದಲ್ಲಿ ಖಗೋಳವಿಜ್ಞಾನ ಮತ್ತು ಗಣಿತಶಾಸ್ತ್ರವನ್ನು ಚರ್ಚಿಸಲಾಗಿದೆ. ಇದರಲ್ಲಿ ೧೨೧ ಶ್ಲೋಕಗಳಿದ್ದು ಅವು ನಾಲ್ಕು ಪಾದಗಳಾಗಿ ವಿಭಾಗಿಸಲ್ಪಟ್ಟಿವೆ. ಎರಡನೆಯ ಕೃತಿಯಾದ **ಆರ್ಯಭಟ ಸಿದ್ಧಾಂತವು** ಅತ್ಯಂತ ಪ್ರಸಿದ್ಧವಾದ ಗ್ರಂಥ. ಇದನ್ನು ಪ್ರಾಚೀನ ಭಾರತದಲ್ಲಿ ಖಗೋಳ ಶಾಸ್ತ್ರದ ಪಠ್ಯಪುಸ್ತಕವನ್ನಾಗಿ ಅಧ್ಯಯನ ಮಾಡುತ್ತಿದ್ದರು. 'ಪೈ' ಎಂಬ ಗಣಿತದ ಪರಿಕಲ್ಪನೆಯ ಸರಿಯಾದ ಮೌಲ್ಯವನ್ನು ನಿರ್ಧರಿಸಿದುದು, ಗಣಿತಶಾಸ್ತ್ರದಲ್ಲಿ ಹಲವಾರು ವಿಧಾನಗಳನ್ನು ವಿವರಿಸಿರುವುದು, ಭೂಮಿ ಸೂರ್ಯನ ಸುತ್ತಲೂ ಸುತ್ತುತ್ತಿದೆ ಎನ್ನುವ ಸಿದ್ಧಾಂತ, ಗ್ರಹಗಳ ಚಲನೆಯನ್ನು ಕರಾರುವಕ್ಕಾಗಿ ಗುರುತಿಸಿರುವುದು, ಕಾಲಗಣತಿ, ಗ್ರಹಗಳ ಚಲನೆಯ ಕಾಲದ ಲೆಕ್ಕಾಚಾರ – ಇವುಗಳು ಆರ್ಯಭಟನ ಕೆಲವು ಅಪೂರ್ವ ಸಾಧನೆಗಳು.

